ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 29–09–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಪಶುಭವನ ಮತ್ತು ಸೂಪರ್ ಸ್ಪೆಶಾಲಿಟಿ ಪಶು ಆಸ್ಪತ್ರೆ ಕಟ್ಟಡದ ಶಂಕುಸ್ಥಾಪನೆ ಹಾಗೂ ಕುರಿ, ಮೇಕೆಗಳ ಬಹೂಪಯೋಗಿ ಅಂಬುಲೇಟರಿ ಕ್ಲಿನಿಕ್‌ಗಳ ಲೋಕಾರ್ಪಣೆ:<br><br>ಪಶುಭವನ ಕಟ್ಟಡದ ಗುದ್ದಲಿ ಪೂಜೆ ಮತ್ತು ಶಂಕುಸ್ಥಾಪನೆ:<br><br>ಸಿದ್ದರಾಮಯ್ಯ,<br>ಮುಖ್ಯಮಂತ್ರಿಗಳು,<br>ಕರ್ನಾಟಕ ಸರ್ಕಾರ<br><br>ಸೂಪರ್ ಸ್ಪೆಶಾಲಿಟಿ ಪಶು ಆಸ್ಪತ್ರೆ ಕಟ್ಟಡದ ಶಂಕುಸ್ಥಾಪನೆ:<br><br>ಡಿ. ವಿ. ಸದಾನಂದಗೌಡ,<br>ಕೇಂದ್ರ ಕಾನೂನು ಸಚಿವರು.<br><br>ಸಮಾರಂಭದ ಉದ್ಘಾಟನೆ:<br><br>ಟಿ.ಬಿ. ಜಯಚಂದ್ರ,<br>ಕಾನೂನು, ಪಶುಸಂಗೋಪನೆ ಖಾತೆ | 30–09–2015<br><br>ಬುಧವಾರ<br><br>ಬೆಳಿಗ್ಗೆ<br><br>11–30 ಗಂಟೆಗೆ | ಕರ್ನಾಟಕ ಪಶುವೈದ್ಯಕೀಯ, ಪಶು ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಆವರಣ, ಹೆಬ್ಬಾಳ, ಬೆಂಗಳೂರು. |

| | | | |
|---|---|---|---|
| | ಸಚಿವರು.<br><br>**<u>ಕುರಿ, ಮೇಕೆಗಳ ಬಹೂಪಯೋಗಿ ಅಂಬುಲೇಟರಿ ಕ್ಲಿನಿಕ್‌ಗಳ ಲೋಕಾರ್ಪಣೆ:</u>**<br><br>ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು.<br><br>**<u>ಮುಖ್ಯ ಅತಿಥಿಗಳು:</u>**<br><br>ಆರ್. ರೋಷನ್ ಬೇಗ್,<br><br>ಮೂಲ ಸೌಕರ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಹಜ್ ಸಚಿವರು.<br><br>ಸಂಪರ್ಕ 9164622999<br><br>ಡಾ ರಾಠೋಡ್,<br>ಉಪ ನಿರ್ದೇಶಕರು,<br>ಪಶುವೈದ್ಯ ಸೇವೆ. | | |
| 2. | ನಂದಾವಲೋಕನ ಕೃತಿಯ ಸಮರ್ಪಣಾ ಸಮಾರಂಭ:<br><br>**<u>ಕೃತಿ ಲೋಕಾರ್ಪಣೆ:</u>**<br><br>ಡಿ. ಹೆಚ್. ಶಂಕರಮೂರ್ತಿ,<br>ಸಭಾಪತಿಗಳು,<br>ಕರ್ನಾಟಕ ವಿಧಾನ ಪರಿಷತ್.<br><br>**<u>ಮುಖ್ಯ ಅತಿಥಿಗಳು:</u>**<br><br>ರಾಮಲಿಂಗಾರೆಡ್ಡಿ,<br>ಸಾರಿಗೆ ಸಚಿವರು | 30–09–2015<br><br>ಬುಧವಾರ<br><br>ಸಂಜೆ<br><br>6–30 ಗಂಟೆಗೆ | ಒಡೆಯರ್ ಸಭಾಂಗಣ,<br><br>ಸೆಂಚುರಿ ಕ್ಲಬ್,<br><br>ಕಬ್ಬನ್ ಪಾರ್ಕ್, ಬೆಂಗಳೂರು. |

| | | | |
|---|---|---|---|
| | ಆರ್. ರೋಷನ್ ಬೇಗ್,<br><br>ಮೂಲ ಸೌಕರ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಹಜ್ ಸಚಿವರು.<br><br>ಶ್ರೀಮತಿ ಉಮಾಶ್ರೀ,<br><br>ಕನ್ನಡ, ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು. | | |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಗಾಂಧೀ ಸೇವಾ ಪ್ರಶಸ್ತಿ – ಕರ್ನಾಟಕ 2015 –ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರು, ಸೆಪ್ಟೆಂಬರ್ 29 (ಕರ್ನಾಟಕ ವಾರ್ತೆ)

ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಗಾಂಧೀ ಜಯಂತಿ ದಿನವಾದ ಅಕ್ಟೋಬರ್ 2 ರಂದು ಸಂಜೆ 5–00 ಗಂಟೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿರುವ ಗಾಂಧೀ ಸೇವಾ ಪ್ರಶಸ್ತಿ – ಕರ್ನಾಟಕ 2015 ಪ್ರಶಸ್ತಿ ಪ್ರದಾನ ಸಮಾರಂಭ ಹಾಗೂ 'ಗಾಂಧೀಜಿ ಕನಸು – ಕರ್ನಾಟಕದಲ್ಲಿ ನನಸು' ಪ್ರಚಾರಾಂದೋಲನಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಲನೆ ನೀಡಲಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂದು ಡಾ. ಹೊ. ಶ್ರೀನಿವಾಸಯ್ಯ ಅವರಿಗೆ ಗಾಂಧೀ ಸೇವಾ ಪ್ರಶಸ್ತಿ ಕರ್ನಾಟಕ – 2015 ಅನ್ನು ಪ್ರದಾನ ಮಾಡಲಿದ್ದಾರೆ.

ಬೆಂಗಳೂರು ನಗರದ ಚಿಕ್ಕಪೇಟೆ ಶಾಸಕ ಆರ್.ವಿ. ದೇವರಾಜ್ ಅವರು ಈ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ. ಮೂಲಸೌಕರ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವ ಆರ್. ರೋಷನ್ ಬೇಗ್ ಅವರು ಪ್ರಾಸ್ತಾವಿಕ ಭಾಷಣ ಮಾಡುವರು.

ಸಮಾರಂಭದಲ್ಲಿ ಕೇಂದ್ರದ ರಸಗೊಬ್ಬರ ಖಾತೆ ಸಚಿವ ಅನಂತಕುಮಾರ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಹೆಚ್. ಕೆ. ಪಾಟೀಲ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಹಾಗೂ ಗಾಂಧೀ ಸೇವಾ ಪ್ರಶಸ್ತಿ – ಕರ್ನಾಟಕ 2015 ರ ಆಯ್ಕೆ ಸಮಿತಿ ಅಧ್ಯಕ್ಷರಾದ ಡಾ. ಚಂದ್ರಶೇಖರ ಕಂಬಾರ ಅವರು ಮುಖ್ಯ ಅತಿಥಿಗಳಾಗಿ ಉಪಸ್ಥಿತರಿರುವರು.

ಅಂದು ಸಂಜೆ 4–00 ಗಂಟೆಯಿಂದ ರಾಮಚಂದ್ರ ಹಡಪದ್ ಮತ್ತು ತಂಡದವರಿಂದ ಗಾಂಧೀ ಪ್ರಿಯ ಭಜನೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಪಲ್ಲವಿ:ಬಾಬು:ಜಿಪಿಆರ್

# ಗಾಂಧೀ ಜಯಂತಿ ಅರ್ಥಪೂರ್ಣಗೊಳಿಸಲು ರಾಜ್ಯಾದ್ಯಂತ ವಾರ್ತಾ ಇಲಾಖೆಯಿಂದ ನಿರಂತರ ಕಾರ್ಯಕ್ರಮ

ಬೆಂಗಳೂರು, ಸೆಪ್ಟೆಂಬರ್ 29 (ಕರ್ನಾಟಕ ವಾರ್ತೆ)

ಗಾಂಧೀ ಜಯಂತಿಯನ್ನು ರಾಜ್ಯಾದ್ಯಂತ ಅರ್ಥಪೂರ್ಣವಾಗಿ ಆಚರಿಸಬೇಕೆಂಬ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಶಯಕ್ಕೆ ಅನುಗುಣವಾಗಿ ಕರ್ನಾಟಕ ಸರ್ಕಾರವು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯನ್ನು ಸಮನ್ವಯ ಇಲಾಖೆಯನ್ನಾಗಿ ನೇಮಿಸಿದೆ. ಈ ನಿಟ್ಟಿನಲ್ಲಿ ಕಳೆದೆರಡು ವರ್ಷಗಳಿಂದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರಂತರ ಕಾರ್ಯಕ್ರಮಗಳನ್ನು ರೂಪಿಸಿದೆ.

ಗಾಂಧೀಜಿ ಮತ್ತು ಅವರ ಸಂದೇಶಗಳನ್ನು ಕುರಿತು ಹಲವಾರು ಪ್ರಕಟಣೆಯನ್ನು ಹೊರತರಲಾಗಿದೆ. ಗಾಂಧೀಜಿ ಕರ್ನಾಟಕಕ್ಕೆ ಪ್ರಥಮ ಬಾರಿ ಭೇಟಿನೀಡಿ 100 ವರ್ಷಗಳು ಸಂದ ಹಿನ್ನೆಲೆಯಲ್ಲಿ ಈ ಭೇಟಿಯ ಶತಮಾನೋತ್ಸವವವನ್ನು ರಾಜ್ಯಾದ್ಯಂತ ಆಚರಿಸಲು ನಿರ್ಧರಿಸಲಾಗಿದೆ. ಬೆಂಗಳೂರಿನ ಗಾಂಧೀಭವನದಲ್ಲಿ "ಗಾಂಧೀ ಕರ್ನಾಟಕ" ಕುರಿತು ಛಾಯಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಇಲಾಖೆಯು ರಾಜ್ಯಾದ್ಯಂತ ವಿಭಿನ್ನವಾಗಿ ಆಚರಿಸುತ್ತಿರುವ ಗಾಂಧೀ ಜಯಂತಿಗೆ ಆಯಾ ಜಿಲ್ಲೆಗಳ ಜಿಲ್ಲಾಡಳಿತ ಕರ್ನಾಟಕ ರಾಜ್ಯ ಗಾಂಧೀ ಸ್ಮಾರಕ ನಿಧಿ ಹಾಗೂ ಮದ್ಯಪಾನ ಸಂಯಮ ಮಂಡಳಿ ತುಂಬು ಮನದ ಒತ್ತಾಸೆ ನೀಡುತ್ತಿದೆ.

ಯುವ ಪೀಳಿಗೆಯ ಮನದಲ್ಲಿ ಗಾಂಧೀಜಿ ತತ್ವ ಚಿಂತನೆಗಳನ್ನು ಬಿತ್ತುವ ನಿಟ್ಟಿನಲ್ಲಿ ವಿದ್ಯಾರ್ಥಿ ಸಮೂಹವನ್ನು ಉದ್ದೇಶಿಸಿ, ಹಲವು ಕಾರ್ಯಕ್ರಮಗಳನ್ನು ಆಯೋಜಿಸಿ ಅನುಷ್ಠಾನಗೊಳಿಸಲಾಗಿದೆ. 'ಕಲಾವಿದರು ಕಂಡಂತೆ ಗಾಂಧೀ' ಚಿತ್ರ ಶಿಬಿರವನ್ನು ಆಯೋಜಿಸಿ ಗಾಂಧೀ ಎಂಬ ಮಹಾನ್ ದರ್ಶನದ ಹಲವು ಆಯಾಮಗಳನ್ನು ಹಿಡಿಯುವ ಯತ್ನ ಮಾಡಿದೆ. 'ಗಾಂಧೀಜಿ ಕನಸು– ಕರ್ನಾಟಕದಲ್ಲಿ ನನಸು' ಎನ್ನುವ ಪ್ರಚಾರಾಂದೋಲನವನ್ನು ಈ ಬಾರಿಯಿಂದ ಆರಂಭಿಸಲಾಗಿದೆ. ಕಳೆದ ಮೂರು ವರ್ಷಗಳಿಂದ ಇಲಾಖೆಯ 'ಜನಪದ' ಮತ್ತು 'ಮಾರ್ಚ್ ಆಫ್ ಕರ್ನಾಟಕ' ಮಾಸಿಕದ ಅಕ್ಟೋಬರ್ ಸಂಚಿಕೆಯನ್ನು ಗಾಂಧೀ ವಿಶೇಷ ಸಂಚಿಕೆಗಳನ್ನಾಗಿ ರೂಪಿಸಿ ಹೊರತರಲಾಗುತ್ತಿದೆ. ವಾರ್ತಾ ಇಲಾಖೆಯ ಆವರಣದಲ್ಲಿ ಗಾಂಧೀಜಿ ಪ್ರತಿಮೆ ಸ್ಥಾಪಿಸಿ ಗಾಂಧೀಜಿಯವರಿಗೆ ಗೌರವ ಸಲ್ಲಿಸುವ ಕಾರ್ಯಕ್ರಮವಿದೆ.

ಕರ್ನಾಟಕ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ 5 ಲಕ್ಷ ರೂ. ನಗದು ಒಳಗೊಂಡ 'ಗಾಂಧೀ ಸೇವಾ ಪ್ರಶಸ್ತಿ – ಕರ್ನಾಟಕ' ಸ್ಥಾಪಿಸಿ, ಗಾಂಧೀ ತತ್ವಗಳನ್ನು ಅನುಷ್ಠಾನಕ್ಕೆ ತಂದು ಅವರ ಆದರ್ಶಗಳಲ್ಲಿ ಜೀವಿಸುತ್ತಿರುವ ಸಾಧಕರಿಗೆ ನೀಡಿ ಗೌರವಿಸುತ್ತದೆ. ಈ ಪುರಸ್ಕಾರ ಇಂದು ನಾಡಿನಲ್ಲಿ ಅತ್ಯಂತ ಪ್ರತಿಷ್ಠಿತವಾದ ಮೌಲ್ಯಯುತ ಪ್ರಶಸ್ತಿಯಾಗಿದೆ. ಕಳೆದೆರಡು ವರ್ಷಗಳಿಂದ ನೀಡಲಾಗುತ್ತಿರುವ ಈ ಪ್ರಶಸ್ತಿ ಈಬಾರಿ ಕರ್ನಾಟಕದಲ್ಲಿ ಗಾಂಧೀ ತತ್ವಚಿಂತನೆಗಳನ್ನು ನೀರೆರೆದು ಪೋಷಿಸುತ್ತಿರುವ ಅಸಾಮಾನ್ಯ ಗಾಂಧೀವಾದಿ ಡಾ. ಹೊ. ಶ್ರೀನಿವಾಸಯ್ಯ ಅವರಿಗೆ ಸಂದಿದೆ.

ಪಲ್ಲವಿ:ಬಾಬು:ಜಿಪಿಆರ್

# ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ಎಲ್ಇಡಿ ಬಲ್ಬ್ ಬಳಕೆ ಮಾಡಲು ಚಿಂತನೆ – ಡಿ.ಕೆ. ಶಿವಕುಮಾರ್

ಬೆಂಗಳೂರು, ಸೆಪ್ಟೆಂಬರ್ 29 (ಕರ್ನಾಟಕ ವಾರ್ತೆ)

ರಾಜ್ಯಾದ್ಯಂತ ಮುಂದಿನ ದಿನಗಳಲ್ಲಿ ಸ್ಥಳೀಯ ಸಂಸ್ಥೆಗಳು ಹಾಗೂ ಮನೆಗಳಲ್ಲಿ ಬಳಸಿ ವಿದ್ಯುತ್‌ದೀಪಗಳನ್ನು ಎಲ್ಇಡಿ (ಎಲ್ಇಡಿ) ಗೆ ಬದಲಾಯಿಸಲು ಚಿಂತನೆ ನಡೆಸಲಾಗಿದೆ ಎಂದು ಇಂಧನ ಸಚಿವ ಡಿ. ಕೆ. ಶಿವಕುಮಾರ್ ಅವರು ತಿಳಿಸಿದರು.

ವಿಧಾನಸೌಧದಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು ಈ ಸಂಬಂಧ ಸಧ್ಯದಲ್ಲೇ ಎಲ್ಇಡಿ ಬಲ್ಬ್ ಉತ್ಪಾದಕರ ಸಭೆ ಕರೆಯಲಾಗಿದ್ದ ಜನಸಾಮಾನ್ಯರಿಗೆ ರಿಯಾಯಿತಿ ದರದಲ್ಲಿ ಎಲ್ಇಡಿ ಬಲ್ಬ್‌ಗಳನ್ನು ವಿತರಿಸಲು ಕ್ರಮಕೈಗೊಳ್ಳಲಾಗಿದೆ. ಎಲ್ಇಡಿ ಬಲ್ಬ್ ಬಳಕೆ ಮಾಡುವುದರಿಂದ ರಾಜ್ಯದಲ್ಲಿ ಸುಮಾರು 800 ಮೆಗಾವ್ಯಾಟ್ ವಿದ್ಯುತ್ ಉಳಿತಾಯವಾಗಲಿದೆ ಎಂದರು.

ಪಾವಗಡದಲ್ಲಿ ಸುಮಾರು 20 ಸಾವಿರ ಕೋಟಿ ರೂ. ವೆಚ್ಚದಲ್ಲಿ ಜಗತ್ತಿನಲ್ಲಿಯೇ ಅತಿದೊಡ್ಡ ಸೋಲಾರ್ ಪಾರ್ಕ್ ನಿರ್ಮಿಸಲು ಈಗಾಗಲೇ ಪ್ರಕ್ರಿಯೆ ಪ್ರಾರಂಭಿಸಲಾಗಿದೆ ಎಂದ ಡಿ.ಕೆ. ಶಿವಕುಮಾರ್ ಅವರು ಈ ಸಂಬಂಧ ಈಗಾಗಲೇ ಸ್ಥಳೀಯ ರೈತರೊಂದಿಗೆ ಮಾತುಕತೆ ನಡೆಸಿದ್ದು, ಸುಮಾರು 12 ಸಾವಿರ ಎಕರೆ ಜಮೀನನ್ನು ವಾರ್ಷಿಕ ಬಾಡಿಗೆ 21,000 ರೂ. ಪಡೆದು (ಪ್ರತಿ ಎಕರೆಗೆ) ಭೂಮಿ ನೀಡಲು ರೈತರು ಒಪ್ಪಿದ್ದು, ಮುಂದಿನ ತಿಂಗಳ 30 ರಂದು ರೈತರೊಟ್ಟಿಗೆ ಮತ್ತೊಂದು ಸಂಪುಟ ಸಭೆ ನಡೆಸಲಾಗುವುದು. ನಂತರ ಮುಂದಿನ ಎರಡು ತಿಂಗಳೊಳಗೆ ರೈತರೊಂದಿಗೆ ಒಪ್ಪಂದ ಮಾಡಿಕೊಂಡು ಸೋಲಾರ್ ಪಾರ್ಕ್ ನಿರ್ಮಾಣ ಕಾರ್ಯ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

ಬೆಂಗಳೂರಿನಲ್ಲಿ ಸುಮಾರು 1510 ಕೋಟಿ ರೂ. ವೆಚ್ಚದಲ್ಲಿ ಗ್ಯಾಸ್ ಘಟಕ ಸ್ಥಾಪಿಸಲು ಮುಂದಾಗಿದ್ದು ಈ ಕಾರ್ಯಪೂರ್ಣಗೊಂಡಲ್ಲಿ ಸುಮಾರು 350 ಮೆ.ವ್ಯಾಟ್ ವಿದ್ಯುತ್ ನಮಗೆ ಸಿಗಲಿದೆ ಎಂದ ಇಂಧನ ಸಚಿವರು, ಸಧ್ಯ ಪ್ರತಿದಿನ 1353 ಮೆ. ವ್ಯಾಟ್ ವಿದ್ಯುತ್ ಖರೀದಿ ಮಾಡಲಾಗುತ್ತದೆ. ರಾಜ್ಯದಲ್ಲಿ ವಿದ್ಯುತ್ ವಿಷಯವಾಗಿ ಚರ್ಚಿಸಲು ಗುರುವಾರ ಇಂಧನ ಇಲಾಖೆಯ ಅಧಿಕಾರಿಗಳ ಸಭೆ ಕರೆಯಲಾಗಿದೆ. ಅಂದು ವಿದ್ಯುತ್ ಉತ್ಪಾಧನೆ ಹಾಗೂ ವಿದ್ಯುತ್ ಖರೀದಿಗೆ ಸಂಬಂಧಿಸಿದಂತೆ ಚರ್ಚೆ ನಡೆಸಿ ಮಹತ್ವದ ನಿರ್ಧಾರವೊಂದನ್ನು ತೆಗೆದುಕೊಳ್ಳಲಾಗುವುದು ಎಂದರು.

ಜನರ ಸಮಸ್ಯೆ ಬಗೆಹರಿಸಲು ಸರ್ಕಾರ ಸಿದ್ಧವಿದೆ. ಹಾಗೆಯೇ ನಾವು ಖರೀದಿಸುವ ವಿದ್ಯುತ್‌ನಿಂದಾಗಿ ಜನರ ಮೇಲೆ ಹೊರೆಯಗಬಾರದು ಎಂಬ ಕಾಳಜಿಯು ಸರ್ಕಾರಕ್ಕೆ ಇದೆ ಎಂದ ಸಚಿವರು ಸೆಂಟ್ರಲ್ ಗ್ರಿಡ್‌ನಿಂದ ಪ್ರತಿದಿನ 50 ಮೆ.ವ್ಯಾಟ್ ವಿದ್ಯುತ್ ರಾಜ್ಯಕ್ಕೆ ಸರಬರಾಜು ಆಗುತ್ತಿದೆ. 200 ಮೆ. ವ್ಯಾಟ್ ವಿದ್ಯುತ್ತನ್ನು ರಾಜ್ಯಕ್ಕೆ ಸರಬರಾಜು ಮಾಡುವುದಾಗಿ ಕೇಂದ್ರ ಇಂಧನ ಸಚಿವರು ಪತ್ರ ಬರೆದು ತಿಳಿಸಿದ್ದಾರೆ ಎಂದರು.

ರಾಜ್ಯದ ಅಣೆಕಟ್ಟುಗಳಲ್ಲಿ ನೀರಿಲ್ಲದಿರುವುದು ವಿದ್ಯುತ್ ಉತ್ಪಾದನೆಗೆ ಅಡಚಣೆಯಾಗಿದೆ ಎಂದ ಡಿ.ಕೆ. ಶಿವಕುಮಾರ್ ಅವರು ಆರ್.ಟಿ.ಪಿ.ಎಫ್ ನ ಏಳನೇ ಘಟಕವು ಇತ್ತೀಚೆಗೆ ಸ್ಥಾಪಿತಗೊಂಡಿದೆ ಎಂದು ಪತ್ರಕರ್ತರಿಗೆ ತಿಳಿಸಿದರು.

ಪಲ್ಲವಿ:ಕೆಪಿಪಿ:ಜಿಪಿಆರ್

## ಸಾರಿಗೆ ಅದಾಲತ್

ಬೆಂಗಳೂರು, ಸೆಪ್ಟೆಂಬರ್ 29 (ಕರ್ನಾಟಕ ವಾರ್ತೆ)

ಬೆಂಗಳೂರು ಎಲೆಕ್ಟ್ರಾನಿಕ್ ಸಿಟಿಯ ಬಿ.ಟಿ.ಎಂ. ನಾಲ್ಕನೇ ಹಂತದಲ್ಲಿರುವ ಪ್ರಾದೇಶಿಕ ಸಾರಿಗೆ ಕಚೇರಿಯಲ್ಲಿ ಅಕ್ಟೋಬರ್ 5 ರಂದು ಮಧ್ಯಾಹ್ನ 3-00 ಗಂಟೆಗೆ ಸಾರಿಗೆ ಅದಾಲತ್ ಏರ್ಪಡಿಸಲಾಗಿದೆ.

ಈ ಕಚೇರಿಯ ವ್ಯಾಪ್ತಿಯ ಸಾರ್ವಜನಿಕರು ಸಾರಿಗೆ ಇಲಾಖೆಗೆ ಸಂಬಂಧಿಸಿದ ಕುಂದುಕೊರತೆಗಳನ್ನು ಆಲಿಸಲಾಗುವುದು. ಆಸಕ್ತ ಸಾರ್ವಜನಿಕರು ಸಾರಿಗೆ ಅದಾಲತ್‌ಗೆ ಹಾಜರಾಗಿ ಇಲಾಖೆಗೆ ಸಂಬಂಧಿಸಿದ ತಮ್ಮ ಕುಂದುಕೊರತೆಗಳ ಬಗ್ಗೆ ಮನವಿ ಸಲ್ಲಿಸಬಹುದಾಗಿದೆ.

ಪಲ್ಲವಿ:ಬಾಬು:ಜಿಪಿಆರ್.

## ಡಾ: ಹೊ. ಶ್ರೀನಿವಾಸಯ್ಯ ಅವರಿಗೆ ಗಾಂಧೀ ಸೇವಾ ಪ್ರಶಸ್ತಿ

**ಬೆಂಗಳೂರು, ಸೆಪ್ಟೆಂಬರ್ 29 (ಕರ್ನಾಟಕ ವಾರ್ತೆ)**

ಗಾಂಧೀ ತತ್ವಗಳನ್ನು ಅನುಷ್ಠಾನಕ್ಕೆ ತಂದು ಗಾಂಧೀ ಚಿಂತನೆಗಳಲ್ಲೇ ಬದುಕುತ್ತಿರುವ ಗಣ್ಯರನ್ನು ಗೌರವಿಸುವ ಸಲುವಾಗಿ ರಾಜ್ಯ ಸರ್ಕಾರವು ಕಳೆದ ವರ್ಷದಿಂದ ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ ಪ್ರದಾನ ಮಾಡುತ್ತಿರುವ ಕರ್ನಾಟಕ ಗಾಂಧೀ ಸೇವಾ ಪ್ರಶಸ್ತಿ 2015 ಕ್ಕಾಗಿ ಈ ಬಾರಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷರಾದ ಡಾ: ಹೊ. ಶ್ರೀನಿವಾಸಯ್ಯ ಅವರನ್ನು ಆಯ್ಕೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಪ್ರಶಸ್ತಿಯು 5.00 ಲಕ್ಷ ರೂ.ಗಳ ನಗದು ಪುರಸ್ಕಾರವನ್ನು ಒಳಗೊಂಡಿದೆ.

ಕರ್ನಾಟಕ ಗಾಂಧಿ ಸೇವಾ ಪ್ರಶಸ್ತಿ ಆಯ್ಕೆ ಸಮಿತಿಯನ್ನು ರಾಜ್ಯ ಸರ್ಕಾರವು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ: ಚಂದ್ರಶೇಖರ ಕಂಬಾರರ ಅಧ್ಯಕ್ಷತೆಯಲ್ಲಿ, ಗರುಡನಗಿರಿ ನಾಗರಾಜ್, ಡಾ: ವೂಡೇ. ಪಿ. ಕೃಷ್ಣ ಮತ್ತು ಶ್ರೀಮತಿ ಇಂದಿರಾ ಕೃಷ್ಣಪ್ಪ ಇವರ ಸದಸ್ಯತ್ವದ ರಚಿಸಿದ್ದು ಸಮಿತಿಯು ಡಾ: ಹೊ. ಶ್ರೀನಿವಾಸಯ್ಯ ಅವರನ್ನು ಆಯ್ಕೆ ಮಾಡಿದೆ.

ಡಾ: ಹೊ. ಶ್ರೀನಿವಾಸಯ್ಯ ಅವರ ಪರಿಚಯ:

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ "ಚೌದರಿ ಕೊಪ್ಪಲು' ಕುಗ್ರಾಮದಿಂದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಅಧ್ಯಕ್ಷಸ್ಥಾನದವರೆಗೆ ನಡೆದುಬಂದ ಡಾ: ಹೊ. ಶ್ರೀನಿವಾಸಯ್ಯ ಅವರ ಹಾದಿ ಕಠಿಣ ಪರಿಶ್ರಮದ್ದು, ಅಸಾಧಾರಣ ದೀಶಕ್ತಿಯದು. ಗಾಂಧೀ ಬಿಂಬದಲ್ಲಿ ಸತ್ಯವನ್ನು ಕಂಡ ಡಾ: ಹೊ. ಶ್ರೀನಿವಾಸಯ್ಯ ಆ ಸತ್ಯದ ನಿರಂತರ ಆರಾಧಕರಾದದ್ದು, ಸತ್ಯಪ್ರಶಂಸೆಯ ಸಾಧನವಾದದ್ದು ಇಂದಿ ಇತಿಹಾಸ.

ತಮ್ಮೂರು ಚೌದರಿ ಕೊಪ್ಪಲನ್ನು ಮಾದರಿ ಗ್ರಾಮ ಮಾಡಿ, ಗಾಂಧೀ ದರ್ಶನಕ್ಕೊಂದು ದಿಟ ಆಯಾಮ ತೋರಿದವರು ಅವರು. 20,000 ಶಾಲಾ ಕಾಲೇಜುಗಳಲ್ಲಿ ಗಾಂಧೀ ಕುರಿತು ಪ್ರವಚನ ನೀಡಿ ಯುವ ಮನಗಳಿಗೊಂದು ಕ್ರಿಯಾತ್ಮಕ ಆಯಾಮ ಕಟ್ಟಿಕೊಟ್ಟ ಡಾ: ಹೊ. ಶ್ರೀನಿವಾಸಯ್ಯ 200 ಕ್ಕೂ ಹೆಚ್ಚು ಗಾಂಧೀ ಅಧ್ಯಯನ ಕೇಂದ್ರಗಳ ಸ್ಥಾಪನೆಗೆ ಮೂಲ ಕಾರಣರಾಗಿದ್ದಾರೆ. ಕಡುಬಡವರ ಕಂಬನಿಯೊರೆಸಲು ಸಹಕಾರ ತತ್ವದ ಮೇಲೆ ಸಹಕಾರಿ ಬ್ಯಾಂಕುಗಳನ್ನು ಪ್ರಾರಂಭಿಸಿ ತಮ್ಮ ತತ್ವ ನಿಷ್ಠೆ ಮೆರೆದಿದ್ದಾರೆ. ಗಾಂಧೀಜಿಯವರ ಕುರಿತು ಹಲವಾರು ಕೃತಿ ರಚಿಸಿ, ಗಾಂಧಿಜೀಯವರ ಚಿಂತನೆಯನ್ನು ಪೀಳಿಗೆಯಿಂದ ಪೀಳಿಗೆಗೆ ದಾಟಿಸುವ ಹರಿಗೋಲಾಗಿದ್ದಾರೆ. ಅವರ 'ನಾ ಕಂಡ ಜರ್ಮನಿ' ಪುಸ್ತಕ ಶ್ರೇಷ್ಠ ಪ್ರವಾಸಕಥನವಾಗಿ, ಪಠ್ಯವಾಗಿ ಸಾಹಿತ್ಯಾಸಕ್ತರ ಗಮನ ಸೆಳೆದಿದೆ.

**ಹೆಚ್‌ಬಿಡಿ/ಬಾಬು/ಕೆಎಂ**

## ಮಣ್ಣಿನ ಆರೋಗ್ಯ ಚೀಟಿ, ಆರೋಗ್ಯ ನಿರ್ವಹಣೆ: ದಕ್ಷಿಣ ರಾಜ್ಯಗಳ ರಾಷ್ಟ್ರೀಯ ಕಾರ್ಯಾಗಾರ

**ಬೆಂಗಳೂರು, ಸೆಪ್ಟೆಂಬರ್ 29 (ಕರ್ನಾಟಕ ವಾರ್ತೆ)**

ಮಣ್ಣು ಆರೋಗ್ಯ ಚೀಟಿ ಮತ್ತು ಮಣ್ಣು ಆರೋಗ್ಯ ನಿರ್ವಹಣೆ ಕುರಿತು ದಕ್ಷಿಣ ರಾಜ್ಯಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಸೆಪ್ಟೆಂಬರ್ 29 ರಂದು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಜಿ.ಕೆ.ವಿ.ಕೆ. ಯಲ್ಲಿ ಕೇಂದ್ರ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಮಂತ್ರಾಲಯ ಮತ್ತು ಕರ್ನಾಟಕ ರಾಜ್ಯ ಕೃಷಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿತ್ತು. ಈ ಕಾರ್ಯಾಗಾರಕ್ಕೆ ಕೇಂದ್ರ ಸರ್ಕಾರದ ಕೃಷಿ ಮತ್ತು ರೈತರ ಕಲ್ಯಾಣ ಮಂತ್ರಾಲಯ ಮತ್ತು ಆಂಧ್ರ ಪ್ರದೇಶ, ತೆಲಂಗಾಣ, ತಮಿಳುನಾಡು, ಕೇರಳ ಮತ್ತು ಕರ್ನಾಟಕ ರಾಜ್ಯಗಳ ಕೃಷಿ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳನ್ನು ಪಾಲ್ಗೊಂಡಿದ್ದರು.

ರಾಜ್ಯ ಕೃಷಿ ಸಚಿವ ಕೃಷ್ಣ ಭೈರೇಗೌಡ ಕಾರ್ಯಾಗಾರವನ್ನು ಉದ್ಘಾಟಿಸಿ, ಮುಂಬರುವ ಎರಡು ವರ್ಷಗಳಲ್ಲಿ ರಾಜ್ಯದ ಎಲ್ಲಾ ರೈತರಿಗೆ ಮಣ್ಣು ವಿಶ್ಲೇಷಣೆ ಆಧಾರಿತ, ರಸಗೊಬ್ಬರಗಳ ಶಿಫಾರಸ್ಸನ್ನು ಒಳಗೊಂಡ ಮಣ್ಣು ಆರೋಗ್ಯ ಚೀಟಿಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ವಿತರಿಸಲಾಗುವುದು. ಪ್ರತಿ ರೈತರ ಜಮೀನಿನ ಮಣ್ಣು ವಿಶ್ಲೇಷಣೆಯ ಫಲಿತಾಂಶದ ವಿವರಗಳನ್ನು ಮತ್ತು ಮಣ್ಣು ಫಲವತ್ತತೆಯ ಆಧಾರದ ಮೇಲೆ ಬೆಳೆಗಳಿಗೆ ಅನುಗುಣವಾಗಿ ಪೋಷಕಾಂಶಗಳ ಶಿಫಾರಸ್ಸುಗಳ ಮಾಹಿತಿಯನ್ನು ಕೃಷಿ ಇಲಾಖೆಯ ಕೆ–ಕಿಸಾನ್ ತಂತ್ರಾಂಶಕ್ಕೆ ಅಳವಡಿಸಲಾಗುವುದು ಎಂದು ತಿಳಿಸಿದರು.

ಕೃಷಿ ಮತ್ತು ರೈತರ ಕಲ್ಯಾಣ ಮಂತ್ರಾಲಯ, ಅಪರ ಕಾರ್ಯದರ್ಶಿ, ಡಾ॥ ಅಶೋಕ ದಳವಾಯಿ, ಕೃಷಿ ಉತ್ಪಾದಕತೆಯಲ್ಲಿ ಮಣ್ಣು ಆರೋಗ್ಯ ಚೀಟಿ ಮತ್ತು ಮಣ್ಣು ಆರೋಗ್ಯ ನಿರ್ವಹಣೆಯ ಮಹತ್ವ ಮತ್ತು ಯೋಜನೆಯ ಅನುಷ್ಠಾನದ ಕುರಿತು ತಿಳಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಕುಲಪತಿ ಡಾ॥ ಎಚ್. ಶಿವಣ್ಣ, ಅಧ್ಯಕ್ಷತೆ ವಹಿಸಿದ್ದ ಕಾರ್ಯಾಗಾರದಲ್ಲಿ ತೋಟಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೀವ್ ಚಾವ್ಲಾ, ಕೃಷಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್, ಕೃಷಿ ಮತ್ತು ರೈತರ ಕಲ್ಯಾಣ ಮಂತ್ರಾಲಯದ ಅಪರ ಆಯುಕ್ತರಾದ ಶ್ರೀಮತಿ ವಂದನಾ ದ್ವಿವೇದಿ, ಕೃಷಿ ಆಯುಕ್ತ ಪಾಂಡುರಂಗ ಬಿ. ನಾಯಕ್, ಜಲಾನಯನ ಅಭಿವೃದ್ಧಿ ಇಲಾಖೆ ಆಯುಕ್ತ, ಎಚ್. ಜಿ. ಶಿವಾನಂದಮೂರ್ತಿ, ಮತ್ತು ಕೃಷಿ ನಿರ್ದೇಶಕ ಸಿ. ಎನ್. ಸ್ವಾಮಿ ಉಪಸ್ಥಿತರಿದ್ದರು.

ಪಲ್ಲವಿ/ಬಾಬು/ಕೆಎಂ

## ಜಿಲ್ಲಾ ಪೊಲೀಸ್ ದೂರು ಪ್ರಾಧಿಕಾರ ರಚನೆ

**ಬೆಂಗಳೂರು, ಸೆಪ್ಟೆಂಬರ್ 29 (ಕರ್ನಾಟಕ ವಾರ್ತೆ)**

**ಕರ್ನಾಟಕ ಪೊಲೀಸ್ ಕಾಯ್ದೆ, 1963 ಮತ್ತು ತಿದ್ದುಪಡಿ ಕಾಯ್ದೆ, 2012ರ ಕಲಂ 20–ಡಿ ಅಡಿ ಸರ್ಕಾರವು ವಿಭಾಗ ಮಟ್ಟದಲ್ಲಿ ಪ್ರಾದೇಶಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ಪ್ರತಿ ಜಿಲ್ಲೆಗೆ ಜಿಲ್ಲಾ ಪೊಲೀಸ್ ದೂರು**

**ಪ್ರಾಧಿಕಾರವನ್ನು ರಚಿಸಿರುತ್ತದೆ. ಹಾಗೂ ಈ ಪ್ರಾಧಿಕಾರಕ್ಕೆ ಜಿಲ್ಲಾ ಪೊಲೀಸ್ ಅಧೀಕ್ಷಕರು ಮತ್ತು ಬೆಂಗಳೂರು ನಗರ ವ್ಯಾಪ್ತಿಗೆ ಸಂಬಂಧಿಸಿದಂತೆ ಅಪರ ಪೊಲೀಸ್ ಆಯುಕ್ತರು (ಆಡಳಿತ) ಇವರನ್ನು ಸದಸ್ಯ ಕಾರ್ಯದರ್ಶಿಗಳನ್ನಾಗಿ ನೇಮಕ ಮಾಡಿರುತ್ತದೆ. ಸಾರ್ವಜನಿಕರು ಪೊಲೀಸ್ ಅಧಿಕಾರಿಗಳಾದ ಉಪ ಪೊಲೀಸ್ ಅಧೀಕ್ಷಕರು ಮತ್ತು ಅವರ ಕೆಳಗಿನ ಹಂತದ ಅಧಿಕಾರಿಗಳು ಮತ್ತು ನೌಕರರ ವಿರುದ್ಧ ದೂರುಗಳು ಹಾಗೂ ಅಹವಾಲು ಇದ್ದಲ್ಲಿ ಈ ಕೆಳಕಂಡ ಜಿಲ್ಲಾ ಪೊಲೀಸ್ ದೂರು ಪ್ರಾಧಿಕಾರಗಳ ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳ ಕಛೇರಿಗಳಿಗೆ ತಮ್ಮ ದೂರು ಅರ್ಜಿಗಳನ್ನು ಸಲ್ಲಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದು ಈ ಮೂಲಕ ತಿಳಿಯಪಡಿಸಿದೆ.**

| **ಕ್ರ. ಸಂ.** | **ಜಿಲ್ಲೆ** | **ಸದಸ್ಯ ಕಾರ್ಯದರ್ಶಿಗಳು** |
|---|---|---|
| 1. | ಬೆಂಗಳೂರು ನಗರ ಜಿಲ್ಲೆ | ಅಪರ ಪೊಲೀಸ್ ಆಯುಕ್ತರು (ಆಡಳಿತ),<br>ಪೊಲೀಸ್ ಆಯುಕ್ತರ ಕಛೇರಿ, ಬೆಂಗಳೂರು ನಗರ,<br>ಇನ್ಫೆಂಟ್ರಿ ರಸ್ತೆ, ಬೆಂಗಳೂರು<br>ದೂರವಾಣಿ: 080–22943359 |
| 2. | ಬೆಂಗಳೂರು ಗ್ರಾಮಾಂತರ ಜಿಲ್ಲೆ | ಜಿಲ್ಲಾ ಪೊಲೀಸ್ ಅಧೀಕ್ಷಕರು, ಬೆಂಗಳೂರು ಜಿಲ್ಲೆ,<br>ನಂ.5, ಮಿಲ್ಲರ್ಸ್ ರಸ್ತೆ, ಬೆಂಗಳೂರು.<br>ದೂರವಾಣಿ: 080–22264350 |
| 3. | ರಾಮನಗರ ಜಿಲ್ಲೆ | ಜಿಲ್ಲಾ ಪೊಲೀಸ್ ಅಧೀಕ್ಷಕರು, ರಾಮನಗರ ಜಿಲ್ಲೆ,<br>ಪೊಲೀಸ್ ಭವನ, 2ನೇ ಮಹಡಿ, ರಾಮನಗರ–59.<br>ದೂರವಾಣಿ: 080–27273700 |
| 4. | ಕೋಲಾರ ಜಿಲ್ಲೆ | ಜಿಲ್ಲಾ ಪೊಲೀಸ್ ಅಧೀಕ್ಷಕರು, ಕೋಲಾರ ಜಿಲ್ಲೆ,<br>ಎಂ.ಬಿ.ರಸ್ತೆ, ಕೋಲಾರ.<br>ದೂರವಾಣಿ: 08152–243060 |
| 5. | ಚಿಕ್ಕಬಳ್ಳಾಪುರ ಜಿಲ್ಲೆ | ಜಿಲ್ಲಾ ಪೊಲೀಸ್ ಅಧೀಕ್ಷಕರು, ಚಿಕ್ಕಬಳ್ಳಾಪುರ ಜಿಲ್ಲೆ<br>ದೂರವಾಣಿ: 08156–262000 |
| 6. | ತುಮಕೂರು ಜಿಲ್ಲೆ | ಜಿಲ್ಲಾ ಪೊಲೀಸ್ ಅಧೀಕ್ಷಕರು, ತುಮಕೂರು ಜಿಲ್ಲೆ,<br>ಬಿ.ಹೆಚ್.ರಸ್ತೆ, ತುಮಕೂರು.<br>ದೂರವಾಣಿ: 08162–272451 |
| 7. | ಚಿತ್ರದುರ್ಗ ಜಿಲ್ಲೆ | ಜಿಲ್ಲಾ ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ಜಿಲ್ಲೆ,<br>ತುರುವನೂರು ರಸ್ತೆ, ಚಿತ್ರದುರ್ಗ–577502.<br>ದೂರವಾಣಿ: 08194–222781 |
| 8. | ದಾವಣಗೆರೆ ಜಿಲ್ಲೆ | ಜಿಲ್ಲಾ ಪೊಲೀಸ್ ಅಧೀಕ್ಷಕರು, ದಾವಣಗೆರೆ ಜಿಲ್ಲೆ,<br>ದಾವಣಗೆರೆ.<br>ದೂರವಾಣಿ: 08192–253400 |
| 9. | ಶಿವಮೊಗ್ಗ ಜಿಲ್ಲೆ. | ಜಿಲ್ಲಾ ಪೊಲೀಸ್ ಅಧೀಕ್ಷಕರು, ಶಿವಮೊಗ್ಗ ಜಿಲ್ಲೆ,<br>ಸಾಗರ ರಸ್ತೆ, ಶಿವಮೊಗ್ಗ –577201.<br>ದೂರವಾಣಿ: 08182–261400 |

* ಈ ಮೇಲ್ಕಂಡ ಎಲ್ಲಾ ಜಿಲ್ಲಾ ಪೊಲೀಸ್ ದೂರು ಪ್ರಾಧಿಕಾರಗಳಿಗೆ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ಇವರು ಅಧ್ಯಕ್ಷರಾಗಿರುತ್ತಾರೆ. ಪ್ರಾದೇಶಿಕ ಆಯುಕ್ತರ ಕಛೇರಿಯ ವಿಳಾಸ: 2ನೇ ಮಹಡಿ, ಬಿಎಂಟಿಸಿ ಕಟ್ಟಡ, ಶಾಂತಿನಗರ, ಬೆಂಗಳೂರು–27, ದೂರವಾಣಿ: 080–22109680

ಪಲ್ಲವಿ/ಬಾಬು/ಕೆಎಂ

## ವಾರ್ತಾ ವಿಶೇಷ:

### ಅಕ್ಟೋಬರ್ 2: ಸರಳತೆ, ದಿಟ್ಟತೆ, 'ವಾಸ್ತವ' ಬದುಕಿನ ಬಹದ್ದೂರರ ಜನುಮದಿನ

ರಾಷ್ಟ್ರಯಜ್ಞದುರಿಯದಾಹ
ತೀರಲೆಂದು ಇಂದಿಗೆ
ಶಸ್ತ್ರಪೂಜೆಯಾಗಲೆಂದು
ವೈರಿಪ್ರಾಣದೊಂದಿಗೆ

1965 ರ ಭಾರತ ಪಾಕ್ ಸಮರ. ಭಾರತದ ಮೇಲೆ ಪಾಕಿಸ್ಥಾನದ ಜನರಲ್ ಅಧ್ಯಕ್ಷ ಅಯುಬ್‌ಖಾನ್ ಕಾಲ್ಕೆರೆದುಕೊಂಡು ಯುದ್ಧಕ್ಕೆ ಬಂದಿದ್ದರು. ಭಾರತ ಸೇನಾಪಡೆಯ ವೀರ ಸೇನಾನಿ ಜನರಲ್ ಅರ್ಜುನ್‌ಸಿಂಗ್ ಯಾವುದೇ ಮುಲಾಜಿಲ್ಲದೆ ಪಾಕ್ ಸೈನ್ಯದ ವಿರುದ್ಧ ರಣಕಹಳೆ ಮೊಳಗಿಸಿದರು. ಇಡೀ ಭಾರತದ ಸೈನ್ಯಕ್ಕೆ ಬೆಂಬಲವಾಗಿ, ಬೆನ್ನೆಲುಬಾಗಿ ನಿಂತು ಭಾರತೀಯರನ್ನು ಹುರಿದುಂಬಿಸುತ್ತಾ ಸಮರಾಂಗಣದಲ್ಲಿ ವಿಜಯೋತ್ಸವವನ್ನು ಭಾರತ ಆಚರಿಸುವಂತೆ ಮಾಡಿದವರು ದೇಶದ ಅಂದಿನ ಪ್ರಧಾನಿ ಭಾರತರತ್ನ ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರೀಯವರು.

1902 ರ ಅಕ್ಟೋಬರ್ 2 ರಂದು ಉತ್ತರ ಪ್ರದೇಶದ ಮೊಗಲ್ ಸರಾಯ್‌ನಲ್ಲಿ ಶಾಲಾ ಶಿಕ್ಷಕ ಶಾರದಾ ಪ್ರಸಾದ್ ಮತ್ತು ರಾಮ್ ದುಲಾರಿದೇವಿ ದಂಪತಿಗಳ ಪುತ್ರರಾಗಿ ಜನಿಸಿದರು. ಇವರ ಪೂರ್ಣ ಹೆಸರು ಲಾಲ್ ಬಹದ್ದೂರ್ ಶ್ರೀವಾಸ್ತವ, ಎರಡು ವರ್ಷದ ಬಾಲಕನಾಗಿದ್ದಾಗಲೇ ತಂದೆಯನ್ನು ಕಳೆದುಕೊಂಡರು. ತೀವ್ರ ಬಡತನ ಪರಿಸ್ಥಿತಿಯಲ್ಲಿ ಶಿಕ್ಷಣ ಮುಂದುವರೆಸಿದರು. ತಮ್ಮ ಶಿಕ್ಷಣಕ್ಕೆ ಪಕ್ಕದ ಊರಿಗೆ ತೆರಳಬೇಕಿದ್ದು, ನದಿ ದಾಟಲು ದೋಣಿಯವನಿಗೆ ಹಣ ಕೊಡಲು ದುಡ್ಡಿಲ್ಲದೆ, ತೊಟ್ಟಿದ್ದ ಬಟ್ಟೆ ನೆನೆಯಬಾರದೆಂಬ ಉದ್ದೇಶದಿಂದ (ಏಕೆಂದರೆ ಅವರಲ್ಲಿದ್ದದ್ದೇ ಒಂದೇ ಜತೆ ಬಟ್ಟೆ) ಅವುಗಳನ್ನು ಕೈಯಲ್ಲಿ ಹಿಡಿದು ನದಿ ದಾಟಿ ನಂತರ ಬಟ್ಟೆ ತೊಟ್ಟು ಶಾಲೆಗೆ ಹೋಗಿ ಜ್ಞಾನಾರ್ಜನೆ ಮಾಡುತ್ತಿದ್ದರು. ಕಾಶೀ ವಿದ್ಯಾಪೀಠದಲ್ಲಿ ವಿದ್ಯಾಭ್ಯಾಸ ಮುಂದುವರೆಸಿ 'ಶಾಸ್ತ್ರೀ' ಪದವಿ ಪಡೆದರು. ಇದರಿಂದಾಗಿ ಮುಂದೆ ಇವರ ಹೆಸರು ಲಾಲ್ ಬಹದ್ದೂರ್ ಶಾಸ್ತ್ರೀ ಎಂದೇ ಪ್ರಸಿದ್ಧವಾಯಿತು.

ಹುಟ್ಟಿನಿಂದ ಸರಳ ಬದುಕು ಇಷ್ಟವಾಗಿದ್ದ ಇವರು ನಂತರ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಲಾಲಾ ಲಜಪತರಾಯ್ ಅವರು ಸ್ಥಾಪಿಸಿದ್ದ ಜನತಾ ಸೇವಾ ಸಂಘದ ಕಾರ್ಯಕರ್ತರಾದರು. ಆ ಸಂಘವು ಅವರಿಗೆ ಸಂಭಾವನೆಯಾಗಿ ನೀಡುತ್ತಿದ್ದ 75 ರೂ.ಗಳಲ್ಲಿ ಜೀವನ ನಡೆಸುತ್ತಿದ್ದರು. ಉಪ್ಪಿನ ಸತ್ಯಾಗ್ರಹ, ಚಲೇಜಾವ್ ಚಳುವಳಿಗಳಲ್ಲಿ ಭಾಗವಹಿಸಿ ಸೆರೆಮನೆ ಶಿಕ್ಷೆ ಅನುಭವಿಸಿದರು.

ಸ್ವಾಂತ್ರಂತ್ರ್ಯಾ ನಂತರ ಸಕ್ರಿಯ ರಾಜಕಾರಣಕ್ಕೆ ಮರಳಿದ ಲಾಲ್ ಬಹದ್ದೂರರು 1952 ರಲ್ಲಿ ರಾಜ್ಯ ಸಭೆ ಸದಸ್ಯರಾಗಿ ಕೇಂದ್ರ ಮಂತ್ರಿ ಮಂಡಲದಲ್ಲಿ ರೈಲ್ವೆ ಸಚಿವರಾಗಿದ್ದರು. 1956 ರಲ್ಲಿ ತಮಿಳುನಾಡಿನ ತುತೂಕುಡಿಯಲ್ಲಿ ಭೀಕರ ರೈಲು ಅಪಘಾತವಾಗಿ ಸಾವು ನೋವುಗಳು ಉಂಟಾದಾಗ ಮನನೊಂದು ನೈತಿಕ

ಹೊಣೆ ಹೊತ್ತು ಸಚಿವ ಪದವಿಗೆ ರಾಜೀನಾಮೆ ನೀಡಿದರು. ನಂತರ ಲೋಕಸಭೆಗೆ ಆಯ್ಕೆಯಾಗಿ ಸಾರಿಗೆ, ಕೈಗಾರಿಕೆ, ವಾಣಿಜ್ಯ ಹಾಗೂ ಗೃಹ ಸಚಿವರಾಗಿ ಕಾರ್ಯ ನಿರ್ವಹಿಸಿದರು.

'ನೆಹರೂ ನಂತರ ಯಾರು?' ಎಂಬ ಪ್ರಶ್ನೆ ದೇಶದ ಮುಂದಿದ್ದಾಗ 1964 ರ ಜೂನ್ 9 ರಂದು ದೇಶದ ಪ್ರಧಾನ ಮಂತ್ರಿ ಪದವಿ ಸ್ವೀಕರಿಸಿದ ಇವರು ತಮ್ಮ ಸಮರ್ಥ ಕಾರ್ಯದ ಮೂಲಕ ಆ ಪ್ರಶ್ನೆಗೆ ಸರಿಯುತ್ತರ ನೀಡಿದರು. 1965 ರ ಪಾಕಿಸ್ಥಾನದ ವಿರುದ್ಧದ 33 ದಿನಗಳ ಯುದ್ದದಲ್ಲಿ ಇವರು ಸಮರ್ಥ ರೀತಿಯಲ್ಲಿ ದೇಶದ ಸೇನಾಪಡೆಗಳನ್ನು ಮುನ್ನಡೆಸಿದ ರೀತಿ ಭಾರತೀಯರು ಎದೆಯುಬ್ಬಿಸುವಂತೆ ಮಾಡಿತು. ನಂತರ ರಷ್ಯಾದ ತಾಷ್ಕೆಂಟ್‌ನಲ್ಲಿ 1966 ರ ಜನವರಿ 3 ರಿಂದ 10 ವರೆಗೆ ಭಾರತ – ಪಾಕ್ ಉಭಯ ದೇಶಗಳ ನಡುವೆ ನಡೆದ ಮಾತುಕತೆಯ ನಂತರ ಶಾಂತಿ ಒಪ್ಪಂದ ಜಾರಿಗೆ ಬಂತು. ಈ ಒಪ್ಪಂದದ ವೇಳೆಯು ಶಾಸ್ತ್ರೀಜಿ ಅವರು ತೋರಿದ ಜಾಣ್ಮೆ ಅನನ್ಯವಾಗಿತ್ತು. ಶಾಂತಿ ಒಪ್ಪಂದಕ್ಕೆ ಸಹಿಯಾದ ದಿನವೇ ಲಾಲ್ ಬಹದ್ದೂರ್ ಶ್ರೀವಾಸ್ತವ (ಶಾಸ್ತ್ರೀಜಿ) ಅವರು ತಾಷ್ಕೆಂಟ್‌ನಲ್ಲಿ ನಿಧನರಾದುದು ಭಾರತೀಯರ ತೀವ್ರ ನೋವಿಗೆ ಕಾರಣವಾಯಿತು. ಭಾರತ ಸರ್ಕಾರವು ಅವರ ನಿಧನಾನಂತರ 1966 ರಲ್ಲಿ ದೇಶದ ಅತ್ಯುನ್ನತ ಗೌರವವಾದ ಭಾರತ ರತ್ನ ಪ್ರಶಸ್ತಿ ಘೋಷಿಸಿತು.

ದೇಶದ ರೈತರು ಮತ್ತು ಸೇನೆಯ ಬಗ್ಗೆ ಅಪಾರ ಗೌರವ ಪ್ರೀತಿ ಬೆಂಬಲ ಹೊಂದಿದ್ದ ಶಾಸ್ತ್ರೀಜಿ ಅವರು "ಜೈ ಜವಾನ್ ಜೈ ಕಿಸಾನ್" ಘೋಷಣೆ ಮಾಡಿದರು. ರೈತರಿಗಾಗಿ ಹಲವು ಯೋಜನೆಗಳನ್ನು ಆರಂಭಿಸಿದರು. ಪ್ರಧಾನಮಂತ್ರಿ ಆದರೂ ಸರಳತೆಯಿಂದಲೇ ಬದುಕಿ ಭಾರತೀಯರಿಗೆ ದಾರಿ ದೀಪವಾಗಿದ್ದರು. ಅಜಾತಶತ್ರುವಾಗಿ ಮೆರೆದ ಶಾಸ್ತ್ರೀಗಳು ಆಡಳಿತ ವೈಖರಿಯಿಂದ, ಸರಳ ನಡೆ ನುಡಿಯಿಂದ ವಿರೋದ ಪಕ್ಷದ ಪ್ರೀತಿಯನ್ನೂ ಗಳಿಸಿದರು. ದೇಶದಲ್ಲಿ ಆಹಾರದ ಕೊರತೆ ಸಂಭವಿಸಬಹುದಾದ ಹಿನ್ನೆಲೆಯಲ್ಲಿ ದೇಶದ ಜನತೆ ವಾರಕ್ಕ ಒಮ್ಮೆ ಒಂದು ಹೊತ್ತಿನ ಊಟ ತ್ಯಜಿಸುವ ಮೂಲಕ ದೇಶದ ಅಭಿವೃದ್ಧಿಗೆ ಪೂರಕವಾಗುವಂತೆ ಕರೆಕೊಟ್ಟು, ತಾವೂ ಅದನ್ನು ತತ್ವಶ: ಅನುಸರಿಸಿದರು. ಇಂದಿಗೂ ಆ ಕಾಲದ ಕೆಲ ಜನರು ಅದನ್ನು ಅನುಸರಿಸುತ್ತಿದ್ದಾರೆ.

ಮಹಾತ್ಮಾ ಗಾಂಧೀಜಿ ಅವರ ರಾಜಕೀಯ ವಿಚಾರಧಾರೆಯಿಂದ ಅತ್ಯಂತ ಪ್ರಭಾವಿತರಾಗಿದ್ದ ದಿ: ಲಾಲ್ ಬಹದ್ದೂರ ಶಾಸ್ತ್ರೀ ಇಂದು ನಮ್ಮೊಂದಿಗೆ ಇಲ್ಲದಿದ್ದರೂ ಅವರು ತೋರಿದ ಸರಳ ನಡೆನುಡಿಗಳು ಧೈರ್ಯ–ಆತ್ಮ ಸ್ಥೈರ್ಯಗಳು ನಮಗೆ ಮಾರ್ಗದರ್ಶಕವಾಗಿದೆ. ಅವರ ಆದರ್ಶ ಪಾಲನೆ ನಮ್ಮೆಲ್ಲರದಾಗಲಿ.

ಬರಹ

. ಕೇಶವ್. ಎಂ. ಟಿ.ಸಿ. ಮಂಜುನಾಥ ಬಾಬು

ಸಹಾಯಕ ನಿರ್ದೇಶಕರು